ಶ್ರೀ ಶ್ರೀಪಾದರಾಜರು ಕೊಂಡಾಡಿದ ಶ್ರೀ ಜಿತಾಮಿತ್ರರು

ವಂದನೆ ಮಾಡಿರೈ ಯತಿಕುಲಚಂದ್ರನ ಪಾಡಿರೈ ॥ ಪ ॥

ಬಂದ ದುರಿತಗಳ ಹಿಂದೆ ಕಳೆದು ಆನಂದ ಪಡುವ ವಿಭುದೇಂದ್ರಕರೋದ್ಭವರಾ ॥ ಅ.ಪ. ॥

ರಘುಕುಲವರಪುತ್ರ ರಾಮನ ಚರಣ ಕರುಣಾಪಾತ್ರ ।
ನಿಗಮೋಕ್ತಿಯ ಸೂತ್ರ ಪಾಠ ಪಠಿಸುವ ಸುಗುಣ ಜಿತಾಮಿತ್ರ ॥
ನಗಧರ ಶ್ರೀಪನ್ನಗಶಯನನ ಗುಣ ।
ಪೊಗಳುವ ಅಪಾರ ಅಗಣಿತ ಮಹಿಮರ ॥ 1 ॥

ವರಮಾಹಾತ್ಮೆ ತಿಳಿಸಿ ಮೋದಲಿಂದೀಪರಿಯಂದದಿ ಚರಿಸಿ ।
ನಿರುತ ಮನ ನಿಲಿಸಿ ಶ್ರೀಹರಿ ಕರಿವದನ ಒಲಿಸಿ ॥
ಧರೆ ಜನರಿಗೆ ಅರಿಯದೆ ಮರೆಯಾಗುತ ಹರುಷದಿ ಗೋನದ ತರುವಲ್ಲಿರುವವರ ॥ 2 ॥

ಮುದದಿ ಕೃಷ್ಣಾತಟಿಯ ಮಧ್ಯದಿ ಸದನದ ಈ ಪರಿಯ ।
ಸತದಾಮಲ ಯತಿವರ್ಯ ತಪಮೌನದಲಿ ಇದ್ದು ಒದಗಿ ನದಿಯ ಸೂಸುತ ಬರಲೇಳು ದಿನ-।
ಕುದಯಾದವರ ಸುಪದ ಕಮಲಂಗಳ ॥ 3 ॥

ಮಾಸ ಮಾರ್ಗಶೀಷಾರಾಧನೆಗಶೇಷದಿನ ಅಮವಾಸ್ಯೆ ।
ದಾಸರು ಪ್ರತಿವರುಷ ಮಾಳ್ಪರು ಲೇಸೆನಲು ಶೃತಿಘೋಷ ॥
ಕಾಶಿಯ ಕ್ಷೇತ್ರಾ ಈ ಸ್ಥಳ ಮಿಗಿಲ್ಯೆ ।
ದಾಸರಿಗೆ ಈ ಭೂಸುರ ಪದಂಗಳ ॥ 4 ॥

ಮಧ್ವಶಾಸ್ತ್ರ ಗ್ರಂಥಸಾರದ ಪದ್ಧತಿ ತಿಳಿದಂಥ ।
ಅದ್ವೈತ್ ಪಂಥ ಮುರಿದು ಉದ್ಧರಿಸಿದಂಥ ॥
ರುದ್ರವಂದ್ಯ ಮೂರುತಿ ರಂಗವಿಠ್ಠಲನ ಪದ ಪದ್ಮಾರಾಧಕ ಪ್ರಸಿದ್ಧ ಮುನೀಂದ್ರರ ॥